**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ, ಸೋಮವಾರಪೇಟೆ.**

**ಎಂ ವಿ ಸಿ 85/2020**

ಪಿ.ಡಬ್ಲ್ಯೂ : 1

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ದಿನಾಂಕ : 13.10.2022

| | | |
|---|---|---|
| ಹೆಸರು | : | ಅಣ್ಣಮ್ಮ |
| ಗಂಡನ ಹೆಸರು | : | ಬಿಜು |

**ಮುಖ್ಯ ವಿಚಾರಣೆ : ಶ್ರೀ ಹೆಚ್ ಸಿ ಎಂ ಕೆ ವಕೀಲರಿಂದ : ಅರ್ಜಿದಾರರ ಪರವಾಗಿ**

ನಾನು ಅರ್ಜಿದಾರಳಿದ್ದು ನನ್ನ ಮುಖ್ಯ ವಿಚಾರಣೆ ಸಾಕ್ಷ್ಯವಾಗಿ ಶಪಥ ಪತ್ರವನ್ನು ಹಾಜರುಪಡಿಸಿರುತ್ತೇನೆ. ಶಪಥ ಪತ್ರದಲ್ಲಿ ಬರೆಸಿರುವುದನ್ನು ನಾನು ಹೇಳಿ ಬರೆಯಿಸಿದ್ದು ನಂತರ ಅದನ್ನು ಓದಿ ಸಹಿ ಮಾಡಿರುತ್ತೇನೆ. ಶಫಥ ಪತ್ರದಲ್ಲಿ ಬರೆದಿರುವುದು ಎಲ್ಲಾ ಸತ್ಯವಾಗಿರುತ್ತದೆ.

ಅಪರಾಧ ಸಂಖ್ಯೆ 117/2019 ರ ದೋಷಾರೋಪಣ ಪತ್ರದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 1 ಎಂದು, ಪ್ರಥಮ ವರ್ತಮಾನ ವರದಿಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 2 ಎಂದು, ದೂರಿನ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 3 ಎಂದು, 2 ಸ್ವತ್ತು ಅಮಾನತ್ತು ಪಂಚನಾಮೆಯ ದೃಢೀಕೃತ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿ ಪಿ 4 ಮತ್ತು 5 ಎಂದು, ಸ್ಥಳ ಪಂಚನಾಮೆಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 6 ಎಂದು, ಐ ಎಂ ವಿ ವರದಿಯ ದೃಢೀಕೃತ ಪ್ರತಿಯನ್ನು

ಹಾಜರುಪಡಿಸಿದ್ದು ಅದನ್ನು ನಿ ಪಿ 7 ಎಂದು, ಗಾಯದ ಪ್ರಮಾಣ ಪತ್ರದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 8 ಎಂದು, ಎ ಐ ಆರ್ ವರದಿಯ ನಕಲಗಳನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 9 ಎಂದು, ನನ್ನ ಮಗನ ವ್ಯಾಸಾಂಗ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 10 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಮುಂದುವರೆದ ಮುಖ್ಯವಿಚಾರಣೆಗೆ ಸಮಯ ಕೇಳಿದ್ದರಿಂದ ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಸೋಮವಾರಪೇಟೆ.